# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಮಾನ್ಯ ಸದಸ್ಯರ ಹೆಸರು | ಶ್ರೀ ಟಿ.ಎ ಶರವಣ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 751 |
| ಉತ್ತರಿಸುವ ದಿನಾಂಕ | 22.02.2023 |
| ಉತ್ತರಿಸುವ ಸಚಿವರು | ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಸರ್ಕಾರದಿಂದ ನಗರ ಪ್ರದೇಶಗಳಲ್ಲಿ ವಿತರಿಸಲಾಗುವ ಮನೆಗಳಿಗೆ ಸಂಬಂಧಿಸಿದಂತೆ ಸಿ.ಎ.ಜಿ ವರದಿ ಹಲವು ಲೋಪದೋಷಗಳನ್ನು ಪತ್ತೆ ಹಚ್ಚಿ, ಅದರಲ್ಲೂ 5.17 ಲಕ್ಷ ಮನೆಗಳ ಗುರಿಯಲ್ಲಿ 88395 ಮನೆ ನಿರ್ಮಾಣ ಆಗಿದೆ ಎಂದು ಕಳೆದ ವರ್ಷ ಮಾರ್ಚ ಗೆ ಸೀಮಿತವಾಗಿ ತಿಳಿಸಿದ್ದು, ಪ್ರಸಕ್ತ ವಸ್ತು ಸ್ಥಿತಿಯ ವಿವರ ನೀಡುವುದು ; | ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ)ಯಡಿ ದಿನಾಂಕ 31.01.2023ರ ಅಂತ್ಯಕ್ಕೆ ಒಟ್ಟು ಅನುಮೋದನೆಗೊಂಡ 5,75,641 ಮನೆಗಳ ಪೈಕಿ, 1,51,004 ಮನೆಗಳು ಪೂರ್ಣಗೊಂಡಿದ್ದು, 1,66,360 ಮನೆಗಳು ಪ್ರಗತಿಯಲ್ಲಿವೆ. ಬಿ.ಎಲ್.ಸಿ ಘಟಕದಡಿ 1,01,897 ಮನೆಗಳು ಪ್ರಾರಂಭವಾಗಬೇಕಿದೆ. ಎ.ಹೆಚ್.ಪಿ ಘಟಕದಡಿ 1,56,380 ಮನೆಗಳ ಕಾಮಗಾರಿ ಪ್ರಾರಂಭಿಸಬೇಕಿದೆ. |
| ಆ) | ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ಫಲಾನುಭವಿಗಳ ಆಯ್ಕೆಯಲ್ಲಿ ನಿಯಮ ಪಾಲಿಸಿಲ್ಲವೆಂದು ಸಿ.ಎ.ಜಿ ವರದಿ ಮಾಡಿದ್ದು, ಇದನ್ನು ಸರಿಪಡಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ. | ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ)ಯ ಮಾರ್ಗಸೂಚಿ ಹಾಗೂ ಕೇಂದ್ರ ಸರ್ಕಾರದ ವಸತಿ ಮತ್ತು ನಗರ ವ್ಯವಹಾರಗಳ ಮಂತ್ರಾಲಯವು 11ನೇ ಕೇಂದ್ರ ಮಂಜೂರಾತಿ ಮತ್ತು ಮೇಲ್ವಿಚಾರಣ ಸಮಿತಿ (CSMC) ಸಭೆಯ ನಿರ್ದೇಶನದಂತೆ ಎ.ಹೆಚ್.ಪಿ ಯೋಜನೆಗಳಡಿ ಫಲಾನುಭವಿಗಳನ್ನು ಅಂತಿಮಗೊಳಿಸಿ ಆಧಾರ ಜೋಡಣೆ ಪೂರ್ಣಗೊಳಿಸಿದ ನಂತರದಲ್ಲಿ ಕೇಂದ್ರ ಸರ್ಕಾರದ ವಸತಿ ಮತ್ತು ನಗರ ವ್ಯವಹಾರಗಳ ಮಂತ್ರಾಲಯವು (MoHUA) 2ನೆಯ ಕಂತಿನ ಅನುದಾನವನ್ನು ಬಿಡುಗಡೆ ಮಾಡಲಿದೆ.<br><br>ಹೀಗಾಗಿ 2ನೆಯ ಕಂತಿನ ಅನುದಾನ ಬಿಡುಗಡೆಯಾಗುವವರೆಗೂ ಅನುಷ್ಠಾನ ಸಂಸ್ಥೆಗಳಿಗೆ ಫಲಾನುಭವಿಗಳನ್ನು ಅಂತಿಮಗೊಳಿಸಲು ಕಾಲಾವಕಾಶ ದೊರೆಯಲಿದೆ.<br><br>ಈ ಹಿನ್ನಲೆಯಲ್ಲಿ ಅನುಷ್ಠಾನ ಸಂಸ್ಥೆಗಳು, ಎ.ಹೆಚ್.ಪಿ ಯೋಜನೆಗಳಡಿ ತಾತ್ಕಾಲಿಕ ಫಲಾನುಭವಿಗಳ ಪಟ್ಟಿಯನ್ನು ಲಗತ್ತಿಸಿ, ವಿಸ್ತೃತ ಯೋಜನಾ ವರದಿಗೆ (DPR) ಅನುಮೋದನೆ ಪಡೆದಿವೆ. ಆದರೆ ಯೋಜನೆಗಳನ್ನು ಕಾರ್ಯಗತ ಗೊಳಿಸುವ ಸಂದರ್ಭದಲ್ಲಿ, ಈ ಕೆಳಕಂಡ ಅಂಶಗಳು ಕಂಡುಬಂದಿವೆ.<br><br>1. ಹಲವು ಫಲಾನುಭವಿಗಳು ವಲಸೆ ಹೋಗಿರುವುದು,<br>2. ತಾವೇ ಮನೆ ನಿರ್ಮಿಸಿಕೊಂಡಿರುವುದು, ಇತರೇ ವಸತಿ ಯೋಜನೆಗಳಡಿ ಪ್ರಯೋಜನ ಪಡೆದಿರುವುದು.<br>3. ಹಲವು ಫಲಾನುಭವಿಗಳು ವಂತಿಕೆ ಪಾವತಿಸಲು ಮುಂದೆ ಬಾರದೇ ಇರುವುದು.<br>4. ಬ್ಯಾಂಕ್‌ಗಳಿಂದ ಸಾಲ ಪಡೆಯಲು ಸಾಧ್ಯವಾಗದೇ ಇರುವುದು. |

| | | |
|---|---|---|
| | | ಹೀಗಾಗಿ ಅನುಷ್ಠಾನ ಸಂಸ್ಥೆಗಳು ಅಂತಹ ಫಲಾನುಭವಿಗಳನ್ನು ಕೈಬಿಟ್ಟು, ಹೊಸ ಫಲಾನುಭವಿಗಳನ್ನು ಆಯ್ಕೆ ಮಾಡುತ್ತವೆ. |
| ಇ) | ವಸತಿ ರಹಿತರ ಸಮೀಕ್ಷೆ ವಿಚಾರದಲ್ಲಿಯೇ ಗೊಂದಲವಿದ್ದು ಸರ್ಕಾರ ನಡೆಸಿರುವ ಸರ್ವೆಯಂತೆ ಇಪ್ಪತ್ತು ಲಕ್ಷ ಮೀರಿ ಫಲಾನುಭವಿಗಳನ್ನು ಗುರುತಿಸಲಾಗಿದ್ದು, ನಗರ ಸ್ಥಳೀಯ ಸಂಸ್ಥೆಗಳು ಕೇವಲ 13 ಲಕ್ಷ ಜನರನ್ನು ಗುರುತಿಸಿರುವುದರಿಂದ ಸುಮಾರು 7 ಲಕ್ಷ ಅರ್ಹ ಫಲಾನುಭವಿಗಳು ಇದರಿಂದ ಅವಕಾಶ ವಂಚಿತರಾಗಿದ್ದು, ಇದನ್ನು ಸರಿಪಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ; ಹಾಗಿದ್ದಲ್ಲಿ, ಈ ಬಗ್ಗೆ ಕೈಗೊಳ್ಳಲಿರುವ ಕ್ರಮವೇನು ? | Karnataka Affordable Housing Policy, 2016 ರಲ್ಲಿ 20.35 ಲಕ್ಷ ವಸತಿ ಬೇಡಿಕೆ ಇದೆಯೆಂದು ಅಂದಾಜಿಸಲಾಗಿದೆ (projected).<br><br>ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ) ಅಭಿಯಾನದಡಿ 2016-17 & 2017-18 ನೇ ಸಾಲಿನಲ್ಲಿ ಕೈಗೊಂಡ ಸಮೀಕ್ಷೆಗನುಗುಣವಾಗಿ ನಗರ ಪ್ರದೇಶದಲ್ಲಿ ಒಟ್ಟು 18.82 ಲಕ್ಷ ಬೇಡಿಕೆ ಗುರುತಿಸಲಾಗಿದೆ. ಈ ಪೈಕಿ13.29 ಲಕ್ಷ ಕುಟುಂಬಗಳನ್ನು ಊರ್ಜಿತಗೊಳಿಸಲಾಗಿದೆ(Validation). ಅರ್ಹ ಕುಟುಂಬಗಳು ಆನ್ ಲೈನ್ ಮೂಲಕ ವಸತಿಗಾಗಿ ಅರ್ಜಿ ಹಾಕಲು ಈಗಲೂ ಅವಕಾಶವಿದೆ. |

ಸಂಖ್ಯೆ: ವಇ 39 ಹೆಚ್‌ಎಫ್‌ಎ 2023]

(ವಿ. ಸೋಮಣ್ಣ)
ವಸತಿ ಮತ್ತು ಮೂಲಸೌಲಭ್ಯ
ಅಭಿವೃದ್ಧಿ ಸಚಿವರು